# ಕರ್ನಾಟಕ ಸರ್ಕಾರ

ಸಂಖ್ಯೆ: ಸಿಆಸುಇ 105 ಸೇವನೆ 2017

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನಸೌಧ,
ಬೆಂಗಳೂರು, ದಿನಾಂಕ:24.03.2021

## ಅಧಿಸೂಚನೆ

ಕರ್ನಾಟಕ ಸಿವಿಲ್ ಸೇವಾ (ಶೀಘ್ರಲಿಪಿಗಾರರು ಮತ್ತು ಬೆರಳಚ್ಚುಗಾರರ ಹುದ್ದೆಗಳ ನೇಮಕಾತಿ) ನಿಯಮಗಳು, 1983 ಇದನ್ನು ಮತ್ತಷ್ಟು ತಿದ್ದುಪಡಿ ಮಾಡುವುದಕ್ಕೆ ದಿನಾಂಕ: 28.10.2020ರ ಅಧಿಸೂಚನೆ ಸಂಖ್ಯೆ: ಸಿಆಸುಇ 105 ಸೇವನೆ 2017ರಲ್ಲಿ ಪ್ರಕಟಿಸಿರುವ ಈ ಮುಂದಿನ ನಿಯಮಗಳ ಕರಡನ್ನು ಅಧಿಕೃತ ರಾಜ್ಯಪತ್ರದಲ್ಲಿ ಇದರ ಪ್ರಕಟಣೆಯ ದಿನಾಂಕದಿಂದ 15 ದಿನಗಳೊಳಗಾಗಿ ಅದರಿಂದ ಬಾಧಿತರಾಗುವ ಸಂಭವವಿರುವ ಎಲ್ಲ ವ್ಯಕ್ತಿಗಳಿಂದ ಆಕ್ಷೇಪಣೆಗಳನ್ನು ಮತ್ತು ಸಲಹೆಗಳನ್ನು ಆಹ್ವಾನಿಸಿ ದಿನಾಂಕ:28.10.2020ರ ಕರ್ನಾಟಕ ರಾಜ್ಯಪತ್ರದ ಭಾಗ IV-ಎ ರಲ್ಲಿ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ ಅಧಿನಿಯಮ, 1978 (1990ರ ಕರ್ನಾಟಕ ಅಧಿನಿಯಮ 14)ರ 3ನೇ ಪ್ರಕರಣದ (2)ನೇ ಉಪಪ್ರಕರಣದ (ಎ) ಖಂಡದ ಮೂಲಕ ಅಗತ್ಯಪಡಿಸಲಾದಂತೆ ಪ್ರಕಟಿಸಲಾಗಿರುವುದರಿಂದ;

ಸದರಿ ರಾಜ್ಯಪತ್ರವನ್ನು ದಿನಾಂಕ:28.10.2020 ರಂದು ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡಿರುವುದರಿಂದ;

ಮತ್ತು, ಸದರಿ ಕರಡಿನ ಬಗ್ಗೆ ಆಕ್ಷೇಪಣೆ/ಸಲಹೆಗಳು ಸ್ವೀಕೃತವಾಗಿದ್ದು ಅವುಗಳನ್ನು ರಾಜ್ಯ ಸರ್ಕಾರವು ಪರಿಶೀಲಿಸಿರುವುದರಿಂದ:

ಈಗ, ಕರ್ನಾಟಕ ರಾಜ್ಯ ಸಿವಿಲ್ಸೇವೆಗಳ ಅಧಿನಿಯಮ, 1978 (1990ರ ಕರ್ನಾಟಕ ಅಧಿನಿಯಮ, 14)ರ 8ನೇ ಪ್ರಕರಣದೊಂದಿಗೆ ಓದಿಕೊಂಡ 3ನೇ ಪ್ರಕರಣದ (1)ನೇ ಉಪಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಈಮೂಲಕ ಈ ಕೆಳಕಂಡ ನಿಯಮಗಳನ್ನು ರಚಿಸುತ್ತದೆ, ಎಂದರೆ:-

## ನಿಯಮಗಳು

**1.ಶೀರ್ಷಿಕೆ ಮತ್ತು ಪ್ರಾರಂಭ:-** (1) ಈ ನಿಯಮಗಳನ್ನು ಕರ್ನಾಟಕ ನಾಗರಿಕ ಸೇವಾ (ಶೀಘ್ರಲಿಪಿಗಾರರು ಮತ್ತು ಬೆರಳಚ್ಚುಗಾರರ ಹುದ್ದೆಗಳ ನೇಮಕಾತಿ) (ತಿದ್ದುಪಡಿ) ನಿಯಮಗಳು, 2021 ಎಂದು ಕರೆಯತಕ್ಕದ್ದು.

(2) ಈ ನಿಯಮಗಳು ಅಂತಿಮವಾಗಿ ಅಧಿಕೃತ ರಾಜ್ಯಪತ್ರದಲ್ಲಿ ಪ್ರಕಟಿಸಿದ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

**2. "ಬೆರಳಚ್ಚುಗಾರ" ಎಂಬುದಕ್ಕೆ ಬದಲಿ ಪದದ ಪ್ರತಿಸ್ಥಾಪನೆ.-** (1) ಶೀರ್ಷಿಕೆಯಲ್ಲಿ ಮತ್ತು ಕರ್ನಾಟಕ ನಾಗರಿಕ ಸೇವಾ (ಶೀಘ್ರಲಿಪಿಗಾರರು ಮತ್ತು ಬೆರಳಚ್ಚುಗಾರರ ಹುದ್ದೆಗಳಿಗೆ ನೇಮಕಾತಿ) ನಿಯಮಗಳು, 1983 (ಇನ್ನು ಮುಂದೆ ಇಲ್ಲಿ ಸದರಿ ನಿಯಮಗಳು ಎಂದು ಕರೆಯಲಾಗುವುದು)ರಲ್ಲಿ ನಿಯಮ 5ನ್ನು ಹೊರತುಪಡಿಸಿ ಎಲ್ಲೆಲ್ಲಿ "ಬೆರಳಚ್ಚುಗಾರ" ಎಂಬ ಪದವಿರುವುದೋ ಅಲ್ಲಲ್ಲಿ "ದತ್ತಾಂಶ ನಮೂದು ಸಹಾಯಕ" ಎಂಬ ಪದಗಳನ್ನು ಪ್ರತಿಸ್ಥಾಪಿಸತಕ್ಕದ್ದು.

(2) ರಾಜ್ಯದ ಯಾವುದೇ ಸೇವೆಯ ಅಥವಾ ಹುದ್ದೆಗೆ ಸಂಬಂಧಿಸಿದಂತೆ ಯಾವುದೇ ನೇಮಕಾತಿ ನಿಯಮಗಳಲ್ಲಿ ಏನೇ ಒಳಗೊಂಡಿದ್ದರೂ "ಬೆರಳಚ್ಚುಗಾರ" ಎಂಬ ಪದನಾಮವನ್ನು ತಕ್ಷಣದಿಂದ ಜಾರಿಗೆ ಬರುವಂತೆ "ದತ್ತಾಂಶ ನಮೂದು ಸಹಾಯಕ" ಎಂಬುದಾಗಿ ಮರುಪದನಾಮಕರಣಗೊಳಿಸತಕ್ಕದ್ದು.

**3. ನಿಯಮ 2ರ ತಿದ್ದುಪಡಿ.-** ಸದರಿ ನಿಯಮಗಳ ನಿಯಮ 2ರ ಉಪ ನಿಯಮ (1) ನ್ನು ಈ ಕೆಳಗಿನಂತೆ ಪ್ರತಿಸ್ಥಾಪಿಸತಕ್ಕದ್ದು, ಅಂದರೆ:-

"(1) ಶೀಘ್ರಲಿಪಿಗಾರ ಮತ್ತು ದತ್ತಾಂಶ ನಮೂದು ಸಹಾಯಕ ಹುದ್ದೆಗೆ ಈ ನಿಯಮಗಳಡಿ ನೇರನೇಮಕಾತಿಯು ಈ ಕೆಳಗಿನಂತೆ ಇರತಕ್ಕದ್ದು:-

(ಎ) ಕರ್ನಾಟಕ ರಾಜ್ಯ ನಾಗರಿಕ ಸೇವೆಗಳು (ಸಾಮಾನ್ಯ ನೇಮಕಾತಿ) ನಿಯಮಗಳು, 1977ರ ಅಡಿಯಲ್ಲಿ ಅನರ್ಹಗೊಳ್ಳದಿರುವ ಪ್ರತಿಯೊಬ್ಬ ವ್ಯಕ್ತಿಯು, ನಿಯಮ 3ರಲ್ಲಿ ನಿರ್ದಿಷ್ಟಪಡಿಸಲಾದ ವಿದ್ಯಾರ್ಹತೆ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿದ್ದಲ್ಲಿ ಶೀಘ್ರಲಿಪಿಗಾರರು ಮತ್ತು ದತ್ತಾಂಶ ನಮೂದು ಸಹಾಯಕರು ವೃಂದದ ನೇರನೇಮಕಾತಿಗೆ ಅರ್ಜಿ ಸಲ್ಲಿಸಲು ಅರ್ಹನಿರುತ್ತಾನೆ. ಈ ವಿದ್ಯಾರ್ಹತೆ ಪರೀಕ್ಷೆಗಳು ಅರ್ಹತಾ ಮಾನದಂಡವಾಗಿರುತ್ತವೆ ಮತ್ತು ವಿದ್ಯಾರ್ಹತೆ ಪರೀಕ್ಷೆಗಳಲ್ಲಿನ ಅಂಕಗಳನ್ನು ಆಯ್ಕೆ ಪ್ರಕ್ರಿಯೆಯಲ್ಲಿ ಪರಿಗಣಿಸಲಾಗುವುದಿಲ್ಲ.

(ಬಿ) ಆಯ್ಕೆ ಪ್ರಾಧಿಕಾರವು ಈ ಅಭ್ಯರ್ಥಿಗಳಿಗೆ ಈ ನಿಯಮಗಳ ಅನುಬಂಧ-1ರಲ್ಲಿ ನಿಗದಿಪಡಿಸಿದಂತೆ ಅನುಬಂಧ-2ರಲ್ಲಿ ನಿಗದಿಪಡಿಸಿದ ಪಠ್ಯಕ್ರಮದಂತೆ ಸ್ಪರ್ಧಾತ್ಮಕ ಪರೀಕ್ಷೆಯನ್ನು ನಡೆಸಿ ಮತ್ತು 1:5 ಪರಿಮಾಣದಲ್ಲಿ ಮೆರಿಟ್ ಪಟ್ಟಿಯನ್ನು ತಯಾರಿಸತಕ್ಕದ್ದು ಮತ್ತು ಮೆರಿಟ್ ಪಟ್ಟಿಯಲ್ಲಿ ಆಯ್ಕೆಗೊಂಡ ಅಭ್ಯರ್ಥಿಗಳು ಕೌಶಲ್ಯ ಪರೀಕ್ಷೆಗೆ ಅರ್ಹರಾಗತಕ್ಕದ್ದು.

(ಸಿ)ಶೀಘ್ರಲಿಪಿಗಾರ ಹುದ್ದೆಗೆ ಸಂಬಂಧಿಸಿದಂತೆ ಅನುಬಂಧ-3ರಲ್ಲಿಮತ್ತು ದತ್ತಾಂಶ ನಮೂದು ಸಹಾಯಕ ಹುದ್ದೆಗೆ ಸಂಬಂಧಿಸಿದಂತೆ ಅನುಬಂಧ-4ರಲ್ಲಿ ನಿಗದಿಪಡಿಸಿರುವಪಠ್ಯಕ್ರಮದಂತೆ,ಮೇಲೆ (ಬಿ)ರಲ್ಲಿ ನಿಗದಿಪಡಿಸಿದಂತೆ ತಯಾರಿಸಲಾದ ಮೆರಿಟ್ ಪಟ್ಟಿಯಲ್ಲಿನ ಅಭ್ಯರ್ಥಿಗಳಿಗೆ ಆಯ್ಕೆ ಪ್ರಾಧಿಕಾರವು ಕೌಶಲ್ಯ ಪರೀಕ್ಷೆಯನ್ನು ನಡೆಸತಕ್ಕದ್ದು. ಕೌಶಲ್ಯ ಪರೀಕ್ಷೆಯಲ್ಲಿ ಶೇಕಡ ಐವತ್ತು ಮತ್ತು ಅದಕ್ಕಿಂತ ಹೆಚ್ಚು ಅಂಕಗಳನ್ನು ಪಡೆದುಕೊಂಡ ಅಭ್ಯರ್ಥಿಗಳು ಆಯ್ಕೆ ಪಟ್ಟಿಯಲ್ಲಿ ಮುಂದಿನ ಪರಿಗಣನೆಗಾಗಿ ಅರ್ಹರಾಗತಕ್ಕದ್ದು. ಕೌಶಲ್ಯ ಪರೀಕ್ಷೆಯಲ್ಲಿ ಅಭ್ಯರ್ಥಿಗಳು ಪಡೆದ ಒಟ್ಟು ಅಂಕಗಳನ್ನು ಆಧರಿಸಿ ನಿರ್ಧರಿಸಲಾದ ಮೆರಿಟ್ ಅನುಕ್ರಮದಲ್ಲಿಆಯ್ಕೆ ಪಟ್ಟಿಯನ್ನು ತಯಾರಿಸತಕ್ಕದ್ದು.

(ಡಿ) ಮೀಸಲಾತಿ ಬಗ್ಗೆ ಇರುವ ಆದೇಶಗಳು ಅಥವಾ ನಿಯಮಗಳನ್ವಯ ಪರಿಶಿಷ್ಟ ಜಾತಿಗಳು, ಪರಿಶಿಷ್ಟ ಪಂಗಡಗಳು, ಇತರ ಹಿಂದುಳಿದ ವರ್ಗಗಳು ಮತ್ತು ಇತರರಿಗೆ ಸೇರಿದ ಅಭ್ಯರ್ಥಿಗಳ ನೇಮಕಾತಿಗಳು ಮತ್ತು ಹುದ್ದೆಗಳ ಮೀಸಲಾತಿಗೆ ಸಂಬಂಧಿಸಿದಂತೆ ಜಾರಿಯಲ್ಲಿರುವ ಆದೇಶಗಳನ್ನು ಮತ್ತು ನಿಯಮಗಳನ್ನು ಪರಿಗಣಿಸಿ ಆಯ್ಕೆ ಪ್ರಾಧಿಕಾರವು ಅಭ್ಯರ್ಥಿಗಳ ಆಯ್ಕೆಯನ್ನು ಮಾಡತಕ್ಕದ್ದು. ಒಂದು ವೇಳೆ ಇಬ್ಬರು ಅಥವಾ ಹೆಚ್ಚು ಅಭ್ಯರ್ಥಿಗಳು ಸ್ಪರ್ಧಾತ್ಮಕ ಪರೀಕ್ಷೆ ಅಥವಾ ಕೌಶಲ್ಯ ಪರಿಕ್ಷೆಯಲ್ಲಿ ಸಮನಾದ ಅಂಕಗಳನ್ನು ಪಡೆದಿದ್ದಲ್ಲಿ ಅಂತಹ ಅಭ್ಯರ್ಥಿಗಳ ಮೆರಿಟ್ ಅನುಕ್ರಮವನ್ನು ಅವರುಗಳ ವಯಸ್ಸಿನ ಆಧಾರದ ಮೇಲೆ ನಿಗದಿಗೊಳಿಸತಕ್ಕದ್ದು, ವಯಸ್ಸಿನಲ್ಲಿ ಹಿರಿಯನಾದ ವ್ಯಕ್ತಿಯನ್ನು ಮೆರಿಟ್ ಅನುಕ್ರಮದಲ್ಲಿ ಮೇಲಿನ ಸ್ಥಾನದಲ್ಲಿ ಇರಿಸತಕ್ಕದ್ದು."

**4. ನಿಯಮ 3ರ ಪ್ರತಿಸ್ಥಾಪನೆ.-** ನಿಯಮ 3ಕ್ಕೆ ಮತ್ತು ಅದಕ್ಕೆ ಸಂಬಂಧಿಸಿದಂತೆ ಇರುವ ನಮೂದುಗಳಿಗೆ, ಈ ಕೆಳಗಿನಂತೆ ಪ್ರತಿಸ್ಥಾಪಿಸತಕ್ಕದ್ದು, ಅಂದರೆ:-

**"3. ಅಭ್ಯರ್ಥಿಗಳ ಶೈಕ್ಷಣಿಕ ವಿದ್ಯಾರ್ಹತೆ :-** ಶೀಘ್ರಲಿಪಿಗಾರರು ಮತ್ತು ದತ್ತಾಂಶ ನಮೂದು ಸಹಾಯಕರು ಹುದ್ದೆಗಳಿಗೆ ನಿಗದಿಪಡಿಸಲಾದ ವಿದ್ಯಾರ್ಹತೆಯು ಈ ಕೆಳಗಿನಂತಿದೆ:-

(1) **ಶೀಘ್ರಲಿಪಿಗಾರರಿಗೆ ಸಂಬಂಧಿಸಿದಂತೆ:-** ಆತನು,

(ಎ) ಪಿಯುಸಿ ಅಥವಾ ತತ್ಸಮಾನ ವಿದ್ಯಾರ್ಹತೆಯನ್ನು; ಮತ್ತು

(ಬಿ) ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯು ನಡೆಸುವ ಕನ್ನಡ ಹಿರಿಯ ಬೆರಳಚ್ಚು ಮತ್ತುಕನ್ನಡ ಹಿರಿಯ ಶೀಘ್ರಲಿಪಿ ಪರೀಕ್ಷೆಯನ್ನು ಅಥವಾ ತತ್ಸಮಾನ ವಿದ್ಯಾರ್ಹತೆಯನ್ನು; ಅಥವಾ

(ಸಿ)ಕನ್ನಡ ಬೆರಳಚ್ಚು ಮತ್ತು ಕನ್ನಡ ಶೀಘ್ರಲಿಪಿಯೊಂದಿಗೆ ಡಿಪ್ಲೊಮಾ ಇನ್ ಕಮರ್ಷಿಯಲ್ಪ್ರಾಕ್ಟೀಸ್ ಅಥವಾ ತತ್ಸಮಾನ ವಿದ್ಯಾರ್ಹತೆಯನ್ನುತೇರ್ಗಡೆಯಾಗಿರತಕ್ಕದ್ದು.

(2) **ದತ್ತಾಂಶ ನಮೂದು ಸಹಾಯಕರಿಗೆ ಸಂಬಂಧಿಸಿದಂತೆ** :- ಆತನು,

(ಎ) ಪಿಯುಸಿ ಅಥವಾ ತತ್ಸಮಾನ ವಿದ್ಯಾರ್ಹತೆಯನ್ನು; ಮತ್ತು

(ಬಿ) ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯು ನಡೆಸುವ ಕನ್ನಡ ಹಿರಿಯ ಬೆರಳಚ್ಚು ಪರೀಕ್ಷೆಯನ್ನು ಅಥವಾ ತತ್ಸಮಾನ ವಿದ್ಯಾರ್ಹತೆಯನ್ನು; ಅಥವಾ

(ಸಿ) ಕನ್ನಡ ಬೆರಳಚ್ಚಿನೊಂದಿಗೆ ಡಿಪ್ಲೊಮಾ ಇನ್ ಕಮರ್ಷಿಯಲ್ ಪ್ರಾಕ್ಟೀಸ್ ಅಥವಾ ತತ್ಸಮಾನ ವಿದ್ಯಾರ್ಹತೆಯನ್ನು ತೇರ್ಗಡೆಯಾಗಿರತಕ್ಕದ್ದು.

**ಟಿಪ್ಪಣಿ:-** ಈ ಮೇಲಿನ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಅರ್ಹತೆ ಮಾತ್ರವಾಗಿ ಈ ಮೇಲಿನ ವಿದ್ಯಾರ್ಹತೆಗಳನ್ನು ನಿಗದಿಪಡಿಸಲಾಗಿದೆ.

**5. ನಿಯಮ 3ಬಿ ರ ತಿದ್ದುಪಡಿ.-** ಸದರಿ ನಿಯಮಗಳಲ್ಲಿನ ನಿಯಮ 3ಬಿರ, ಉಪ ನಿಯಮ (3) ಕ್ಕೆ ಈ ಕೆಳಗಿನಂತೆ ಪ್ರತಿಸ್ಥಾಪಿಸತಕ್ಕದ್ದು, ಅಂದರೆ:-

"(3) ಪ್ರತಿಯೊಬ್ಬ ಅಭ್ಯರ್ಥಿಯು ಆಯ್ಕೆ ಪ್ರಾಧಿಕಾರವು ನಿಗದಿಪಡಿಸುವ ಶುಲ್ಕವನ್ನು ಅವರ ಅರ್ಜಿಯೊಂದಿಗೆ ಪಾವತಿಸತಕ್ಕದ್ದು:

ಪರಂತು, ಪರಿಶಿಷ್ಟ ಜಾತಿಗಳು, ಪರಿಶಿಷ್ಟ ಪಂಗಡಗಳು ಮತ್ತು ಇತರ ಹಿಂದುಳಿದ ವರ್ಗಗಳ ಪ್ರವರ್ಗ-1 ಕ್ಕೆ ಸೇರಿದ ಆಭ್ಯರ್ಥಿಗಳು ಶುಲ್ಕವನ್ನು ಸಂದಾಯ ಮಾಡತಕ್ಕದ್ದಲ್ಲ.

**6. ನಿಯಮ 3ಸಿ ರ ತಿದ್ದುಪಡಿ.-** ಸದರಿ ನಿಯಮಗಳ ನಿಯಮ 3ಸಿ ರಲ್ಲಿ,-

(1) ಉಪ ನಿಯಮ (1) ರಲ್ಲಿ, "ವಿದ್ಯಾರ್ಹತೆ ಪರೀಕ್ಷೆಯಲ್ಲಿ ಅಭ್ಯರ್ಥಿಗಳು ಒಟ್ಟಾರೆಯಾಗಿ ಪಡೆದ ಅಂಕಗಳ ಶೇಕಡವಾರು ಆಧಾರದ ಮೇಲೆ" ಎಂಬ ಪದಗಳ ಬದಲಾಗಿ "ಕೌಶಲ್ಯ ಪರೀಕ್ಷೆಯಲ್ಲಿ ಅಭ್ಯರ್ಥಿಗಳು ಪಡೆದ ಒಟ್ಟು ಅಂಕಗಳ ಆಧಾರದ ಮೇಲೆ" ಎಂಬ ಪದಗಳನ್ನು ಪ್ರತಿಸ್ಥಾಪಿಸತಕ್ಕದ್ದು.; ಮತ್ತು

(2) ಉಪ ನಿಯಮ (3) ರಲ್ಲಿ,"ವಿದ್ಯಾರ್ಹತೆ ಪರೀಕ್ಷೆಯಲ್ಲಿ ಅಭ್ಯರ್ಥಿಗಳು ಒಟ್ಟಾರೆಯಾಗಿ ಪಡೆದ ಅಂಕಗಳ ಶೇಕಡವಾರು ಆಧಾರದ ಮೇಲೆ" ಎಂಬ ಪದಗಳ ಬದಲಾಗಿ "ಕೌಶಲ್ಯ ಪರೀಕ್ಷೆಯಲ್ಲಿ ಅಭ್ಯರ್ಥಿಗಳು ಪಡೆದ ಒಟ್ಟು ಅಂಕಗಳ ಆಧಾರದ ಮೇಲೆ" ಎಂಬ ಪದಗಳನ್ನು ಪ್ರತಿಸ್ಥಾಪಿಸತಕ್ಕದ್ದು.;

**7. "ದೈಹಿಕ ಅಂಗವಿಕಲತೆ" ಎಂಬ ಪದಗಳನ್ನು ಬದಲಿಸಿ ಪ್ರತಿಸ್ಥಾಪಿಸುವುದು.-** ಸದರಿ ನಿಯಮಗಳಲ್ಲಿ, ಎಲ್ಲೆಲ್ಲಿ "ದೈಹಿಕ ಅಂಗವಿಕಲತೆ" ಎಂಬ ಪದಗಳು ಇರುವುದೋ ಅಲ್ಲಿ "ಮಾನದಂಡದ ಅಂಗವಿಕಲತೆಯುಳ್ಳ ವ್ಯಕ್ತಿ" ಎಂಬ ಪದಗಳನ್ನು ಪ್ರತಿಸ್ಥಾಪಿಸತಕ್ಕದ್ದು.

**8. ಅನುಬಂಧಗಳ ಸೇರ್ಪಡೆ.-** ಸದರಿ ನಿಯಮಗಳ ನಿಯಮ 5ರ ನಂತರದಲ್ಲಿ ಈ ಕೆಳಗಿನ ಅನುಬಂಧಗಳನ್ನು ಸೇರ್ಪಡೆ ಮಾಡತಕ್ಕದ್ದು, ಅಂದರೆ:-

## ಅನುಬಂಧ -1
**(ನಿಯಮ– 2ನ್ನು ನೋಡಿ)**

**ಸ್ಪರ್ಧಾತ್ಮಕ ಪರೀಕ್ಷೆಗೆ ಮಾದರಿ :-**

**ಶೀಘ್ರಲಿಪಿಗಾರ ಮತ್ತು ದತ್ತಾಂಶ ನಮೂದು ಸಹಾಯಕ ಹುದ್ದೆಗೆ ಸ್ಪರ್ಧಾತ್ಮಕಪರೀಕ್ಷೆಯುಈ ಕೆಳಗಿನ ವಿಷಯಗಳನ್ನು ಒಳಗೊಂಡಿರತಕ್ಕದ್ದು.**

**ಪರೀಕ್ಷೆಯ ಸ್ವರೂಪ**

| ಕ್ರಮ ಸಂಖ್ಯೆ | ವಿಷಯ | ಪ್ರಶ್ನೆಗಳ ಸಂಖ್ಯೆ | ಗರಿಷ್ಠ ಅಂಕಗಳು | ಪರೀಕ್ಷೆಯ ಅವಧಿ |
|---|---|---|---|---|
| 1 | ಸಾಮಾನ್ಯ ಜ್ಞಾನ | 25 | 25 | 90 ನಿಮಿಷಗಳು |
| 2 | ಸಾಮಾನ್ಯ ಕನ್ನಡ | 25 | 25 | |
| 3 | ಸಾಮಾನ್ಯ ಇಂಗ್ಲಿಷ್ | 25 | 25 | |
| 4 | ಗಣಕ ಯಂತ್ರ ಜ್ಞಾನ | 25 | 25 | |
| ಒಟ್ಟು | | 100 | 100 | |

(ಬಿ) ಪ್ರಶ್ನೆ ಪ್ರತಿಕೆಯು ಬಹು ಆಯ್ಕೆಯ ವಸ್ತುನಿಷ್ಠ ಮಾದರಿಯಲ್ಲಿ ಮಾತ್ರ ಇರತಕ್ಕದ್ದು. .
(ಸಿ) ಪ್ರತಿಯೊಂದು ತಪ್ಪು ಉತ್ತರಕ್ಕೆ 0.25 ಋಣಾತ್ಮಕ ಅಂಕವನ್ನು ಗುರುತಿಸತಕ್ಕದ್ದು**.**

## ಅನುಬಂಧ -II
**(ನಿಯಮ 2ನ್ನು ನೋಡಿ)**

**ಶೀಘ್ರಲಿಪಿಗಾರ ಮತ್ತು ದತ್ತಾಂಶ ನಮೂದು ಸಹಾಯಕ ಹುದ್ದೆಗಳಿಗೆ ನೇರ ನೇಮಕಾತಿಗೆ ಸ್ಪರ್ಧಾತ್ಮಕಪರೀಕ್ಷೆಯ ಪಠ್ಯಕ್ರಮ**

**(1) ಸಾಮಾನ್ಯ ಜ್ಞಾನ : ( ಗರಿಷ್ಠ 25 ಅಂಕಗಳು)**

**(ಎ) ಸಾಮಾನ್ಯ ಬುದ್ಧಿಮತ್ತೆ**

ಸಾಮ್ಯತೆ, ಹೋಲಿಕೆ ಮತ್ತು ಬೇಧ, ಅವಕಾಶ ದೃಷ್ಟಿ, ಸಮಸ್ಯೆಯ ಬಗೆಹರಿಸುವಿಕೆ, ವಿಶ್ಲೇಷಣೆ, ತೀರ್ಮಾನ, ತೀರ್ಮಾನ ತೆಗೆದುಕೊಳ್ಳುವ ದೃಷ್ಟಿಯ ನೆನಪು, ತಾರತಮ್ಯ ಗುರುತಿಸುವಿಕೆ, ಸಂಬಂಧದ ಬಗ್ಗೆಯೋಚನೆ, ಅಂಕಗಣಿತ ವಿವೇಚನೆ, ಪದ ಮತ್ತು ಚಿತ್ರದ ವರ್ಗೀಕರಣ, ಅಂಕಗಣಿತ ಸಂಖ್ಯೆಗಳ ಕ್ರಮಗಳು, ಪದರಹಿತ ಕ್ರಮಗಳು, ವಿಚಾರ ಮತ್ತು ಚಿಹ್ನೆಗಳ ಸಂಕ್ಷಿಪ್ತ ಸಂಗ್ರಹಣೆ, ಸಂಬಂಧ, ವಿಚಾರ ಮತ್ತು ಚಿಹ್ನೆಗಳ ವಿಶ್ಲೇಷಣಾ ಕಾರ್ಯಗಳು.

**(ಬಿ) ಸಾಮಾನ್ಯ ತಿಳುವಳಿಕೆ**

ಪ್ರಚಲಿತ ವಿಷಯಗಳು, ಕರ್ನಾಟಕವನ್ನುಅನುಲಕ್ಷಿಸಿ ಭಾರತ ಇತಿಹಾಸ, ಕರ್ನಾಟಕವನ್ನು ಅನುಲಕ್ಷಿಸಿ ಭಾರತದ ಭೂಗೋಳ, ಭಾರತ ಸಂವಿಧಾನ, ರಾಜ್ಯ ಮತ್ತು ಪ್ರಾದೇಶಿಕ ಆಡಳಿತ, ಪ್ರಶಸ್ತಿಗಳು ಮತ್ತು ಗೌರವಗಳು, ಕರ್ನಾಟಕದಲ್ಲಿ ಆರ್ಥಿಕ ಅಭಿವೃದ್ಧಿ, ದಿನಗಳು ಮತ್ತು ಆಚರಣೆಗಳು, ಪುಸ್ತಕಗಳು ಮತ್ತು ಬರಹಗಾರರು, ಕರ್ನಾಟಕದ ಪರಿಸರ ಸಮಸ್ಯೆಗಳು ಮತ್ತು ಅಭಿವೃದ್ಧಿ ವಿಷಯಗಳು, ವಿಜ್ಞಾನ ಮತ್ತು ತಂತ್ರಜ್ಞಾನ.

**(2) ಸಾಮಾನ್ಯ ಕನ್ನಡ: (ಗರಿಷ್ಠ 25 ಅಂಕಗಳು)**

ಸಾಮಾನ್ಯ ಕನ್ನಡ ಪತ್ರಿಕೆಯು ಸಾಮಾನ್ಯವಾಗಿ ಪಿಯುಸಿ ಪರೀಕ್ಷೆಯನ್ನು ತೇರ್ಗಡೆಯಾದ ವಿದ್ಯಾರ್ಥಿಯ ಕನಿಷ್ಠ ಬೌದ್ಧಿಕ ಮಟ್ಟವನ್ನು ಸಮರ್ಥಿಸುವಂತಹದ್ದಾಗಿರತಕ್ಕದ್ದು. ಇದು ಅಭ್ಯರ್ಥಿಯ, ಕನ್ನಡ ವ್ಯಾಕರಣ, ಶಬ್ದಕೋಶ, ಕಾಗುಣಿತ, ಸಮಾನಾರ್ಥಕ ಪದಗಳು, ವಿರುಧ್ಧಾರ್ಥಕ ಪದಗಳು, ಕನ್ನಡ ಭಾಷೆಯನ್ನು ಅರ್ಥಮಾಡಿಕೊಳ್ಳುವ ಮತ್ತು ಗ್ರಹಿಸುವ ಸಾಮರ್ಥ್ಯ ಮತ್ತು ಸರಿಯಾದ ಮತ್ತು ತಪ್ಪಾದ ಬಳಕೆಯನ್ನು ಗುರುತಿಸುವ ಸಾಮರ್ಥ್ಯವನ್ನು ಪರೀಕ್ಷಿಸುವ ಉದ್ದೇಶವನ್ನು ಒಳಗೊಂಡಿರುತ್ತದೆ.

**(3) ಸಾಮಾನ್ಯ ಇಂಗ್ಲೀಷ್: (ಗರಿಷ್ಠ 25 ಅಂಕಗಳು)**

ಸಾಮಾನ್ಯ ಇಂಗ್ಲೀಷ್ ವ್ಯಾಕರಣ ಮತ್ತು ವಾಕ್ಯ ರಚನೆ, ಪಾರ್ಟ್ಸ್ ಆಫ್ ಸ್ಪೀಚ್- ನೌನ್, ಪ್ರೊನೌನ್, ವರ್ಬ್, ಪ್ರಿಪೊಸಿಷನ್, ಕಂಜಕ್ಷನ್, ಇತ್ಯಾದಿ. ಆರ್ಟಿಕಲ್ಸ್, ಆಕ್ಟಿವ್ ಮತ್ತು ಪ್ಯಾಸಿವ್ ವಾಯ್ಸ್, ಡೈರೆಕ್ಟ್ ಮತ್ತು ಇಂಡೈರೆಕ್ಟ್ ಸ್ಪೀಚ್, ಫಿಲ್ ಇನ್ ದಿ ಬ್ಲ್ಯಾಂಕ್ಸ್, ಸೆಂಟೆನ್ಸ್ ಕರೆಕ್ಷನ್, ಸ್ಪೆಲ್ಲಿಂಗ್ಸ್, ಫ್ರೇಸಸ್ ಮತ್ತು ಇಡಿಯಮ್ಸ್, ಅಂಟೋನಿಮ್ಸ್ ಮತ್ತು ಸಿನಾನಿಮ್ಸ್, ಸ್ಪಾಟಿಂಗ್ ಎರರ್ಸ್, ಪ್ಯಾರಾಜುಂಬಲ್ಸ್, ಫ್ರೇಸ್ ರಿಪ್ಲೇಸ್ ಮೆಂಟ್.

**(4) ಗಣಕ ಯಂತ್ರದ ಬಗ್ಗೆ ಜ್ಞಾನ:(ಗರಿಷ್ಠ 25 ಅಂಕಗಳು)**

ಕಂಪ್ಯೂಟರ್ ಫಂಡಮೆಂಟಲ್ಸ್ ಮತ್ತು ವಿಂಡೋಸ್-ವರ್ಡ್ ಪ್ರಾಸೆಸಿಂಗ್, ಎಂಎಸ್-ವರ್ಡ್, ಸ್ಪ್ರೆಡ್ ಶೀಟ್ ಮತ್ತು ಎಂಎಸ್- ಎಕ್ಸೆಲ್, ಕಂಪ್ಯೂಟರ್ ಕಮ್ಯುನಿಕೇಶನ್, ಇಂಟರ್ನೆಟ್., ಇ-ಮೇಲ್, ವರ್ಡ್ ಪ್ರಾಸೆಸಿಂಗ್‌ನಲ್ಲಿ ನುಡಿ ಕನ್ನಡ ತಂತ್ರಾಂಶದ ಜ್ಞಾನ, ಪವರ್ ಪಾಯಿಂಟ್.

**ಅನುಬಂಧ-III**
**(ನಿಯಮ 2ನ್ನು ನೋಡಿ)**

**ಶೀಘ್ರಲಿಪಿಗಾರರ ಹುದ್ದೆಗಳಿಗೆ ಅಳವಡಿಸಿಕೊಳ್ಳಬಹುದಾದ ಕೌಶಲ್ಯ ಪರೀಕ್ಷಾ ಪಠ್ಯಕ್ರಮದ ಮಾದರಿ:**

**ಸೂಚನೆ:- ಶೀಘ್ರಲಿಪಿಗಾರರ ಹುದ್ದೆಗಳಿಗೆ ಶೀಘ್ರಲಿಪಿ ವೇಗ ಪರೀಕ್ಷೆ (260 ಎಲ್‌ಪಿಎಂ) ಮತ್ತು ಬೆರಳಚ್ಚು ಪರೀಕ್ಷೆಗಳೆರಡು (34 ಡಬ್ಲ್ಯೂಪಿಎಂ) ಇರುತ್ತದೆ.**

**ಕೌಶಲ್ಯ ಪರೀಕ್ಷೆ:**

| ಕ್ರ. ಸಂ | ಪರೀಕ್ಷಾ ವಿಷಯ | ವೇಗ ದರ | ಪರೀಕ್ಷೆಯ ಪಠ್ಯಾಂಶಗಳು | ಉಕ್ತಲೇಖನ/ ಉತ್ತರಾವಧಿ | ಲಿಪ್ಯಾಂತರದ ಅವಧಿ | ಉತ್ತರ ವಿಧಾನ (ಪರೀಕ್ಷಾ ವಿಧಾನ) | ಗರಿಷ್ಠಾಂಕ | ಅರ್ಹತಾಂಕ* |
|---|---|---|---|---|---|---|---|---|
| 1 | ಕನ್ನಡ ಶೀಘ್ರಲಿಪಿ ವೇಗ ಕೌಶಲ್ಯ | 260 ಎಲ್ ಎಂಪಿ | 1300 ಅಕ್ಷರಗಳು** | 05 ನಿಮಿಷಗಳು | 50 ನಿಮಿಷಗಳು | ಕೈಬರವಣಿಗೆ | 100* | 50* |

| | | | | | | | | |
|---|---|---|---|---|---|---|---|---|
| 2. | ಕನ್ನಡ ಬೆರಳಚ್ಚು ವೇಗಕೌಶಲ್ಯ | 34 ಡಬ್ಲ್ಯೂಪಿಎಂ | 1700 ಒತ್ತುಗಳು*** (5ಒತ್ತುಗಳಿಗೆ 01 ಪದ – 34*5*10ನಿ) | 10 ನಿಮಿಷಗಳು | - | ಗಣಕ ಯಂತ್ರ ಎಡಿಟ್ & ಸ್ಪೆಲ್ ಚೆಕ್ ಅನ್ನು ನಿಷ್ಕ್ರಿಯಗೊಳಿಸಿರಬೇಕು) | 100* | 50* |

* ಗರಿಷ್ಠ ಅಂಕಗಳು 200 ಹಾಗೂ ಅರ್ಹತಾ ಅಂಕಗಳು 100 ಆಗಿರುತ್ತದೆ.

** ಪರೀಕ್ಷೆಯ ಪಠ್ಯಾಂಶದ ಪ್ರಶ್ನೆಪತ್ರಿಕೆಯು 3+2 ನಿಮಿಷಗಳ ಭಾಗಗಳನ್ನು ಹೊಂದಿದ್ದು, ಮೊದಲ ಭಾಗ ಸರಳ ಪ್ರಚಲಿತ ವಿಷಯಗಳ ಮೇಲಿನ ಭಾಷಣ ಮತ್ತು ಎರಡನೇ ಭಾಗ ಯಾವುದೇ ಪತ್ರವ್ಯವಹಾರಕ್ಕೆ ಸಂಬಂಧಿಸಿದಂತೆ ಪ್ರಶ್ನೆಯನ್ನು ಹೊಂದಿರಬೇಕು.

*** 5 ಒತ್ತುಗಳಿಗೆ ಒಂದು ಪದದಂತೆ 10 ನಿಮಿಷಗಳ ಅವಧಿಯಲ್ಲಿ (2-3 ಕಂಡಿಕೆಗಳನ್ನು ಹೊಂದಿರುವ) ಒಟ್ಟು 1700 ಒತ್ತುಗಳ ಪ್ರಶ್ನೆಪತ್ರಿಕೆಯಾಗಿರಬೇಕು.

## ಅನುಬಂಧ-IV
## (ನಿಯಮ 2ನ್ನು ನೋಡಿ)

**ದತ್ತಾಂಶ ನಮೂದು ಸಹಾಯಕ ಹುದ್ದೆಗಳಿಗೆ ಅಳವಡಿಸಿಕೊಳ್ಳಬಹುದಾದ ಕೌಶಲ್ಯ ಪರೀಕ್ಷಾ ಪಠ್ಯಕ್ರಮದ ಮಾದರಿ:-**

**ಕೌಶಲ್ಯ ಪರೀಕ್ಷೆ:**

| ಪರೀಕ್ಷಾ ವಿಷಯ | ವೇಗ ದರ | ಪರೀಕ್ಷೆಯ ಪಠ್ಯಾಂಶಗಳು | ಉಕ್ತಲೇಖನ/ ಉತ್ತರಾವಧಿ | ಲಿಪ್ಯಾಂತರದ ಅವಧಿ | ಉತ್ತರ ವಿಧಾನ (ಪರೀಕ್ಷಾ ವಿಧಾನ) | ಗರಿಷ್ಠಾಂಕ | ಅರ್ಹತಾಂಕ* |
|---|---|---|---|---|---|---|---|
| ಕನ್ನಡ ಬೆರಳಚ್ಚು ವೇಗಕೌಶಲ್ಯ | 34 ಡ ಬ್ಲ್ಯೂಪಿ ಎಂ | 1700 ಒತ್ತುಗಳು **(5 ಒತ್ತುಗಳಿಗೆ 01 ಪದ – 34*5*10ನಿ) | 10 ನಿಮಿಷಗಳು | - | ಗಣಕ ಯಂತ್ರ (ಎಡಿಟ್ & ಸ್ಪೆಲ್ ಚೆಕ್ ಅನ್ನು ನಿಷ್ಕ್ರಿಯಗೊಳಿಸಿರಬೇಕು) | 100* | 50* |

* ಗರಿಷ್ಠ ಅಂಕಗಳು 100 ಹಾಗೂ ಅರ್ಹತಾ ಅಂಕಗಳು 50 ಆಗಿರುತ್ತದೆ.

** 5 ಒತ್ತುಗಳಿಗೆ ಒಂದು ಪದದಂತೆ 10 ನಿಮಿಷಗಳ ಅವಧಿಯಲ್ಲಿ (2-3 ಕಂಡಿಕೆಗಳನ್ನು ಹೊಂದಿರುವ) ಒಟ್ಟು 1700 ಒತ್ತುಗಳ ಪ್ರಶ್ನೆಪತ್ರಿಕೆಯಾಗಿರಬೇಕು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ತೇಜಾವತಿ.ಎನ್.)
ಸರ್ಕಾರದ ಅಧೀನ ಕಾರ್ಯದರ್ಶಿ
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಸೇವಾ ನಿಯಮಗಳು-ವಿಶೇಷ ಕೋಶ)